ದಿನಾಂಕ 03-07-2018 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರಿದ ಪಾಟಿ ಸವಾಲು ಃ ಶ್ರೀ ಎ ವಿ ಕೆ ವಕೀಲರಿಂದ

- - - - -

ಒಟ್ಟು 3 ಎಕರೆ ಜಮೀನಿನಲ್ಲಿ ಶೇಕಡಾ 46 ರಂತೆ ಎಷ್ಟು ಎಕರೆ ಜಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಿಡಲಾಗಿದೆ ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ಸಾರ್ವಜನಿಕ ಉದ್ದೇಶಕ್ಕೆ ಬಿಟ್ಟ ಜಾಗದ ಸ್ವಾಧೀನವು ಸರ್ಕಾರದವರದು ಇರುತ್ತದೆ ಎಂದರೆ ಸರಿ. ನನ್ನ ಮತ್ತು ವಾದಿಯರ ಮಧ್ಯೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ. ನಿಪಿ 5 ಮತ್ತು 6 ರಲ್ಲಿ ಆಸ್ತಿಯು ಪಾಲು ವಿಭಾಗದ ಪ್ರಕಾರ ವಾದಿಗೆ ಬಂದಿದೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ಆಸ್ತಿಯು ಪಾಲು ವಿಭಾಗದ ಪ್ರಕಾರ ಯಾರ ಯಾರ ಮಧ್ಯದಲ್ಲಿ ಪಾಲು ವಿಭಾಗ ಆಗಿದೆ ಎಂದರೆ ಸಾಕ್ಷಿಯು, ನನ್ನ ಮತ್ತು ನನ್ನ ಅಣ್ಣಂದಿರ ಮದ್ಯೆ ಪಾಲು ವಿಭಾಗ ಆಗಿದ್ದು ನನ್ನ ಹೆಸರಿನ ಆಸ್ತಿಯನ್ನು ನನ್ನ ಹೆಂಡತಿಯ ಹೆಸರಿಗೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪಾಲು ವಿಭಾಗದ ಪತ್ರದಲ್ಲಿ ನನ್ನ ಹೆಂಡತಿಯು ಪಕ್ಷಗಾರರಾಗಿ ಇರಲಿಲ್ಲ ಎಂದರೆ ಸರಿ. ನನ್ನ ಹೆಂಡತಿಯ ಹೆಸರಿಗೆ ಯಾವ ದಾಖಲಾತಿಗಳನ್ನು ಮಾಡಿಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅರ್ಜಿ ಮೂಲಕ ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಕ್ಕು ಬದಲಾವಣೆ ವಹಿ ಹಾಜರುಪಡಿಸಿತರುತ್ತೇವೆ. ಅರ್ಜಿಯ ಪ್ರತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಹಕ್ಕು ಬದಲಾವಣೆ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರು 629 ಡಿ ಒಟ್ಟು 9 ಎಕರೆ 69 ಸೆಂಟ್ಸ ಇರುತ್ತದೆ. ಸರ್ವೆ ನಂಬರು 629 ಡಿ ಒಟ್ಟು 9 ಎಕರೆ 69 ಸೆಂಟ್ಸ ಎರಡು ಉಪ ವಿಭಾಗಗಳಾಗಿ ಸುಮಾರು 6 ರಿಂದ 8 ವರ್ಷಗಳ ಹಿಂದೆ ಆಗಿರುತ್ತದೆ. ಈ ದಾವೆಯನ್ನು ಒಟ್ಟು 5.15 ಎಕರೆಗೆ ಸಲ್ಲಿಸಿರುತ್ತೇವೆ. ದಾವಾ ಸ್ವತ್ತು ಉಪ ವಿಭಾಗ ಆದ ನಂತರ ನಮ್ಮ ಭಾಗಕ್ಕೆ ಬಂದಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ದಾಖಲೆಯು ಇರುತ್ತದೆ ಹಾಜರುಪಡಿಸಿದ ಬಗ್ಗೆ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಅಂತಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಕುರಿತಂತೆ ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ನಿಪಿ 3 ಸರ್ವೆ ನಂಬರು 629 ಡಿ ಒಟ್ಟು 9 ಎಕರೆ 69 ಸೆಂಟ್ಸ ಜಮೀನಿಗೆ ಸಂಬಂಧಿಸಿದ ನಕಾಶೆ ಎಂದರೆ ಸರಿ. ನಿಪಿ 2 ರಲ್ಲಿ ದಾವಾ ಸ್ವತ್ತಿನ ಚೆಕ ಬಂದಿಯನ್ನು ತೋರಿಸಿದ್ದಾರೆ. ನಿಪಿ 2 ರಲ್ಲಿ ದಾವಾ ಸ್ವತ್ತಿನ ಚೆಕ ಬಂದಿಯನ್ನು ತೋರಿಸದೇ ಇದ್ದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 2 ರಲ್ಲಿ ಚೊರನೂರಿನಿಂದ ಬೊಮ್ಮಘಟಕ್ಕೆ ಹೋಗುವ ರಸ್ತೆ ಇದೆ ಎಂದು ತೋರಿಸಿದ್ದಾರೆಂದರೆ ಸರಿ. ಭೂ ಪರಿವರ್ತನೆ ಆದ ಜಮೀನನ್ನು ಹೊರತುಪಡಿಸಿ ಉಳಿದ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಿರಾ ಎಂದರೆ ಸಾಕ್ಷಿಯು ಅದರಲ್ಲಿ ಹುಣಸೇ ಮರಗಳು ಇರುವುದರಿಂದ ಸಾಗುವಳಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಅಸ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ಮಾಡಿರುತ್ತೇನೆ ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನೆನಪಿರುವುದಿಲ್ಲ. ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 6 ರ ಕಲಂ ನಂಬರ 12 ರಲ್ಲಿ ಸಾಗುವಳಿ ಮಾಡುವ ಬಗ್ಗೆ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಯಾವುದೇ ಪಹಣಿಗಳಲ್ಲೂ ಕೂಡಾ ತೋರಿಸುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಪ್ರತಿವಾದಿಯರು ನಾವು ಹುಣಸೇ ಮರದಲ್ಲಿ ಹಣ್ಣು ಬಿಡಿಸಲು ಹೋದಾಗ ಅಡ್ಡಿ ಪಡಿಸಿರುವುದರಿಂದ ಸಲ್ಲಿಸಿರುತ್ತೇವೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಮನೆ ಮತ್ತು ಕಣಗಳು ಬರುತ್ತವೆ ಎಂದರೆ ಸರಿ.

ದಾವಾ ಸ್ವತ್ತಿನ ಬಗ್ಗೆ ವಿವಾದ ಆರಂಭವಾದಾಗ ನಾನು ಸರ್ವೆ ಮಾಡಿಸಿರುತ್ತೇನೆ. ಸದರಿ ಸರ್ವೆಯಲ್ಲಿ ಹುಣಸೆ ಮರಗಳು ಪ್ರತಿವಾದಿಗಳ ಸ್ವಾಧೀನದಲ್ಲಿವೆ ಎಂದು ವರದಿ ಬಂತು ಎಂದರೆ ಸರಿಯಲ್ಲ. ಸದರಿ ವರದಿಯನ್ನು ಹಾಜರುಪಡಿಸಿದಲ್ಲಿ ನಿಜಾಂಶ ಗೊತ್ತಾಗುತ್ತದೆಂದು ನಾನು ಸರ್ವೆ ವರದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯರ ಸ್ವಾಧೀನನುಭವದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇಲ್ಲದೇ ಇದ್ದರು ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ಪ್ರಕರಣ ಸಲ್ಲಿಸಿದ್ದೇವೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಮಾಹಿತಿ ನನಗೆ ಇರುತ್ತದೆ. ಅದರಲ್ಲಿ ಬರೆದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.